**ಕರ್ನಾಟಕ ಸರ್ಕಾರ**

**55ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ**

**ಎಸ್.ಸಿ.ನಂ.599/2020**

**ಪ್ರಮಾಣ ವಚನ ಬೋಧಿಸಲಾಯಿತು.**
**ದಿನಾಂಕಃ 05-01-2023.**
**ಪಿಡಬ್ಲ್ಯೂಃ 01 ಸಿಡಬ್ಲ್ಯೂಃ 01**

| | | |
|---|---|---|
| ಹೆಸರು | ಃ | **ಕೃಷ್ಣಮೂರ್ತಿ** |
| ತಂದೆಯ ಹೆಸರು | ಃ | **ಸದಾಶಿವ.ಬಿ.ಕೆ** |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | **ಖಾಸಗಿ ಕೆಲಸ** |
| ವಾಸ | ಃ | **ಬನ್ನೇರುಘಟ್ಟ ರಸ್ತೆ, ಬೆಂಗಳೂರು** |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಚಾಸಾ2 ನನ್ನ ತಾಯಿ. ಈ ಕೇಸಿನ ಘಟನೆ ನಡೆದಾಗ ಅವರಿಗೆ 74 ವರ್ಷ ಆಗಿತ್ತು. ಆ ಸಮಯದಲ್ಲಿ ನಾವು ನಂ.623, 15ನೇ ಮೈನ್, 22ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು ಇಲ್ಲಿ ವಾಸ ಇದ್ದೆವು. ನಮ್ಮ ಮನೆಯಲ್ಲಿ ನಾನು ನನ್ನ ತಂದೆ, ತಾಯಿ, ಹೆಂಡತಿ ಮತ್ತು ಇಬ್ಬರು ಮಕ್ಕಳು ವಾಸ ಇದ್ದೆವೆ.

2. ದಿಃ14-01-2020ರಂದು ನಾನು ನನ್ನ ಹೆಂಡತಿ ಮತ್ತು ನನ್ನ ತಂದೆ ಹೊರಗಡೆ ಹೋಗಿದ್ದೆವು. ಮನೆಯಲ್ಲಿ ನಮ್ಮ ತಾಯಿ ಮತ್ತು ನನ್ನ 5 ವರ್ಷದ ಮಗಳು ಇದ್ದರು. ಈ ಘಟನೆ ಸಮಯದಲ್ಲಿ ನನ್ನ ಮಗಳು ವಾಶ್ ರೂಂನಲ್ಲಿದ್ದರು. ಆ ದಿನ ಮಧ್ಯಹ್ನ ಸುಮಾರು 1.40ರಿಂದ 1.45ರ ಸಮಯದಲ್ಲಿ ಈ ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಮನೆ ಒಳಗಡೆ ಪ್ರವೇಶಿಸಿ ನಮ್ಮ ತಾಯಿಗೆ ಚಾಕು ತೋರಿಸಿ ಈರುಳ್ಳಿಯನ್ನ

ಬಾಯಿ ಒಳಗಡೆ ತುರುಕಿ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನ ಕಿತ್ತುಕೊಳ್ಳಲು ಪ್ರಯತ್ನ ಮಾಡಿದಾಗ ನನ್ನ ತಾಯಿ ಸರ ಹಿಡಿದುಕೊಳ್ಳಲು ಪ್ರಯತ್ನ ಮಾಡಿದಾಗ ಆರೋಪಿ ಸರ ಕಿತ್ತುಕೊಂಡಾಗ ನನ್ನ ತಾಯಿಯ ಕೈಯಲ್ಲಿ ಮಾಂಗಲ್ಯ ಮಾತ್ರ ಉಳಿಯಿತು. ಆರೋಪಿ ನನ್ನ ತಾಯಿಗೆ ಹೊಡೆದು ಸರ ಕಿತ್ತುಕೊಂಡು ಅಲ್ಲಿಂದ ಹೋದ. ನಮ್ಮ ಮನೆಯ ಮೇಲ್ ಭಾಗದಲ್ಲಿ ನಮ್ಮ ಮನೆಯ ಓನರ್ ಇದ್ದರು ಅವರು ನನಗೆ ಫೋನ್ ಮಾಡಿ ಈ ವಿಷಯ ತಿಳಿಸಿದರು. ಆಗ ನಾನು ಮನೆಗೆ ಬಂದೆ.

3. ನಾನು ಮನೆಗೆ ಬಂದಾಗ ಏನು ನಡೆಯಿತು ಅಂತ ನನ್ನ ತಾಯಿ ನನಗೆ ತಿಳಿಸಿದರು ಅವರು ಗಾಭರಿಯಾಗಿದ್ದರು. ಸುಮಾರು 50-60 ಗ್ರಾಂ ತೂಕದ ಚಿನ್ನದ ಸರ ಅದರ ಬೆಲೆ ರೂ.1,80,000/- ಕಿತ್ತುಕೊಂಡು ಹೋಗಿದ್ದು ಅಂತ ನಮೂದಿಸಿ ನಾನು ಬನಶಂಕರಿ ಪೊಲೀಸರಿಗೆ ದೂರು ಕೊಟ್ಟಿದ್ದೇನೆ. ನಾನು ಕೊಟ್ಟ ದೂರನ್ನ ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸಿದ್ದೇನೆ. ದೂರನ್ನ **ನಿ.ಪಿ.1** ಎಂತಲೂ ಸಾಕ್ಷಿಯ ಸಹಿಯನ್ನ **ನಿ.ಪಿ.1(ಎ)** ಎಂತಲೂ ಗುರುತಿಸಲಾಯಿತು.

4. ನಾನು ದೂರು ಕೊಟ್ಟ ನಂತರ ಪೊಲೀಸರು ನಮ್ಮ ಮನೆಗೆ ಬಂದಿದ್ದು ನಾವು ಅವರಿಗೆ ಘಟನಾ ಸ್ಥಳ ತೋರಿಸಿ ಘಟನೆಯ ಬಗ್ಗೆ ಹೇಳಿದ್ದು ಅವರು ಮಹಜರ್ ಮಾಡಿದರು. ಆ ಮಹಜರ್ ಗೆ ನಾನು ಸಹ ಸಹಿ ಮಾಡಿರುತ್ತೇನೆ. ಆ ಸಹಿಯನ್ನ ಈಗ ನೋಡಿ ಗುರುತಿಸಿದ್ದೇನೆ. ಮಹಜರ್ ಅನ್ನು **ನಿ.ಪಿ.2** ಎಂತಲೂ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು

ಗುರುತಿಸಲಾಯಿತು. ಈ ಮಹಜರ್ ಗೆ ಚಾಸಾ3 ಮತ್ತು 4 ಹಾಗೂ ನನ್ನ ತಾಯಿ ಸಹಿ ಮಾಡಿದ್ದಾರೆ.

5. ಈ ಘಟನೆ ನಡೆದು 10 ದಿನ ಬಿಟ್ಟು ಪೊಲೀಸರು ಚಿನ್ನ ಸಿಕ್ಕಿದೆ ನೀವು ಮತ್ತು ನಿಮ್ಮ ತಾಯಿ ಠಾಣೆಗೆ ಬನ್ನಿ ಅಂತ ಹೇಳಿದರು. ನಾನು ಮತ್ತು ನನ್ನ ತಾಯಿ ಪೊಲೀಸ್ ಠಾಣೆಗೆ ಹೋದೆವು. ಪೊಲೀಸರು ಅಲ್ಲಿ ಚಿನ್ನ ಮತ್ತು ಆರೋಪಿಯನ್ನ ತೋರಿಸಿದರು. ಆ ಚಿನ್ನದ ಸರವನ್ನ ನನ್ನ ತಾಯಿ ಗುರುತು ಹಿಡಿದರು. ಅದನ್ನ ಆರೋಪಿ ಕಡೆಯಿಂದ ಅಮಾನತ್ತು ಪಡಿಸಿದ್ದಾಗಿ ಪೊಲೀಸರು ತಿಳಿಸಿದರು. ನಂತರ ಆ ಚಿನ್ನದ ಸರವನ್ನ ನಾವು ಬಿಡಿಸಿಕೊಂಡಿದ್ದೆವೆ. ಆ ಚಿನ್ನದ ಸರವನ್ನ ನಾನು ಈಗ ಪೋಟೋದಲ್ಲಿ ನೋಡಿ ಗುರುತಿಸಿದ್ದೇನೆ. ಈ ಪೋಟೋವನ್ನ **ನಿ.ಪಿ.3** ಎಂದು ಗುರುತಿಸಲಾಯಿತು. ಆ ದಿನ ನಾನು ಠಾಣೆಯಲ್ಲಿ ನೋಡಿದ ಆರೋಪಿ ಈಗ ನ್ಯಾಯಾಲಯದ ಮುಂದೆ ಇರುತ್ತಾರೆ. ಈ ಆರೋಪಿಯನ್ನ ನನ್ನ ತಾಯಿ ಸಹ ಪೊಲೀಸ್ ಠಾಣೆಯಲ್ಲಿ ಇವನೇ ಕಿತ್ತುಕೊಂಡು ಹೋಗಿದ್ದು ಗುರುತಿಸಿದ್ದಾರೆ.

6. ನಾನು ಪೊಲೀಸ್ ಠಾಣೆಯಲ್ಲಿ ನೋಡಿದ ಕೃತ್ಯಕ್ಕೆ ಬಳಸಿದ ಚಾಕುವನ್ನು ತೋರಿಸಿದರೆ ಗುರುತಿಸುತ್ತೇನೆ. ಆ ಚಾಕು ಈಗ ನ್ಯಾಯಾಲಯದ ಮುಂದೆ ಇರುವ ಚಾಕು ಇರುತ್ತದೆ. ಆ ಚಾಕುವನ್ನು **ಮು.ಮಾ.1** ಎಂದು ಗುರುತಿಸಲಾಯಿತು. ಆರೋಪಿಯನ್ನ ಠಾಣೆಯಲ್ಲಿ ಗುರುತಿಸಿದ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಸಮಯ ಬೇಡಿದ್ದು ಸಕಾರಣ ಇಲ್ಲದೆ ಇರುವುದರಿಂದ ಬೇಡಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**(ಶ್ರೀರಾಮ ನಾರಾಯಣ ಹೆಗಡೆ)**
**55ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,**
**(ಸಿಸಿಹೆಚ್-56), ಬೆಂಗಳೂರು ನಗರ.**